156 (380) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರದ ಬೆಳವಣಿಗೆಗನುಗುಣವಾಗಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಯಾವ ಯಾವ ಯೋಜನೆಗಳನ್ನು ಯೋಜಿಸಲಾಗಿದೆ;

ಆ) ಸದರಿ ಯೋಜನೆಗಳನ್ನು ಎಲ್ಲಿ ಜಾರಿಗೊಳಿಸಲಾಗುತ್ತಿದೆ (ಯೋಜನಾ ವೆಚ್ಚ ವಿವರಗಳನ್ನು ನೀಡುವುದು);

ಇ) ಈ ಯೋಜನೆಗಳ ಪೈಕಿ ಜಾರಿಗೊಳಿಸಿರುವ ಹಾಗೂ ಜಾರಿಗೊಳಿಸಬೇಕಿರುವ ಯೋಜನೆಗಳ ವಸ್ತುಸ್ಥಿತಿ ಏನು;

ಈ) ಈ ಯೋಜನೆಗಳಿಂದ ಮುಂದಿನ ಎಷ್ಟು ವರ್ಷಗಳ ಕಾಲ ವಿದ್ಯುಚ್ಛಕ್ತಿ ಸಮಸ್ಯೆ ಇರುವುದಿಲ್ಲ.

ಉ) ಈ ಯೋಜನೆಗಳಿಂದ ಯಾವ ಯಾವ ಬಡಾವಣೆ/ಪ್ರದೇಶಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಒದಗಿಸಲು ಉದ್ದೇಶಿಸಿದೆ;

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಅ) ಮತ್ತು ಆ)

ಮೈಸೂರು ನಗರದ ಬಿಳವಣಿಗೆಗನುಗುಣವಾಗಿ ವಿದ್ಯುತ್ ಸರಬರಾಜನ್ನು ಒದಗಿಸಲು ಹಾಗೂ ಮುಂದಿನ ದಿನಗಳಲ್ಲಿ ಹೆಚ್ಚಾಗುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಯೋಜಿಸಿರುವ ಯೋಜನೆಗಳು, ಜಾರಿಗೊಳಿಸಲಗುತ್ತಿರುವ ಸ್ಥಳಗಳು ಮತ್ತು ಯೋಜನಾ ವೆಚ್ಚದ ವಿವರಗಳು ಈ ಕೆಳಕಂಡಂತೆ ಇವೆ.

ಕ್ರ ಸಂ.	ಯೋಜನೆಯ ವಿವರ ಮತ್ತು ಜಾರಿಗೊಳಿಸಲಾಗುತ್ತಿರುವ ಸ್ಥಳ	ಯೋಜನಾ ವೆಚ್ಚ (ಲಕ್ಷ ರೂ.ಗಳಲ್ಲಿ)
1	ಮೇಘಲಾಪುರದಲ್ಲಿ 66/11 ಕೆವಿ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ	224.00
2	ಹಾಸನದ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದ ಲೋಡನ್ನು ಪ್ರತ್ಯೇಕವಾದ 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ಮೂಲಕ ಶಿವಮೊಗ್ಗ-ಮೈಸೂರು ಮಾರ್ಗದಿಂದ ತೆಗೆದು ಶಿವಮೊಗ್ಗ-ಬೆಂಗಳೂರು ಮಾರ್ಗಕ್ಕೆ ವರ್ಗಾವಣೆ.	760.00
3	ಕೇಂದ್ರ ಸರ್ಕಾರದ ಪಿ.ಜಿ.ಸಿ.ಐ.ಎಲ್. ಸಂಸ್ಥೆವತಿಯಿಂದ ಬಸ್ತಿಪುರದಲ್ಲಿ 400 ಕೆವಿ ವಿದ್ಯುತ್ ಕೇಂದ್ರದ ನಿರ್ಮಾಣ.	13,500.00 (ವಿದ್ಯುತ್ ಪ್ರಸರಣಾ ಮಾರ್ಗದ ವೆಚ್ಚವೂ ಸೇರಿದಂತೆ.

4	ಇಲವಾಲದಲ್ಲಿ 66/11 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ.	395.40
5	ಜಯಪುರದಲ್ಲಿ 66/11 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ.	350.00
6	ವಾಜಮಂಗಲದಲ್ಲಿ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದ ನಿರ್ಮಾಣ.	1802.00
7	ಮೈಸೂರು ನಗರದಲ್ಲಿ ಎ.ಪಿಡಿ.ಆರ್.ಪಿ. ಯೋಜನೆಯಡಿಯಲ್ಲಿ ವ್ಯವಸ್ಥೆ ಸುಧಾರಣಾ ಕಾಮಗಾರಿಗಳು.	2578.00

ಇ) **I. ಮೇಲ್ಕಾಣಿಸಿದ ಯೋಜನೆಗಳ ಪೈಕಿ ಜಾರಿಗೊಳಿಸಿರುವ ಯೋಜನೆಗಳ ವಿವರಗಳು:**

ಕ್ರ ಸಂ	ಯೋಜನೆ	ವಿವರಗಳು
1	ಹಾಸನದ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದ ಲೋಡನ್ನು ಪ್ರತ್ಯೇಕವಾದ 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ಮೂಲಕ ಶಿವಮೊಗ್ಗ–ಮೈಸೂರು ಮಾರ್ಗದಿಂದ ತೆಗೆದು ಶಿವಮೊಗ್ಗ–ಬೆಂಗಳೂರು ಮಾರ್ಗಕ್ಕೆ ವರ್ಗಾಯಿಸುವುದು.	ಹಾಸನ 220 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ಹೊರೆಯನ್ನು ಪ್ರತ್ಯೇಕವಾದ 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ಮೂಲಕ ಶಿವಮೊಗ್ಗ–ಮೈಸೂರು 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದಿಂದ ಶಿವಮೊಗ್ಗ–ಬೆಂಗಳೂರು 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ಮೇಲೆ **ದಿನಾಂಕ: 7–5–2004 ರಂದು ವರ್ಗಾಯಿಸ–ಲಾಗಿದೆ.** ಈ ಕ್ರಮದಿಂದಾಗಿ, ಶಿವಮೊಗ್ಗ–ಮೈಸೂರು 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ಮೇಲೆ ಹೊರೆ ಕಡಿಮೆಗೊಂಡಿದ್ದು ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನ ವೋಲ್ಟೇಜ್ ಗುಣಮಟ್ಟದಲ್ಲಿ ಸುಧಾರಣೆಯಾಗಿರುತ್ತದೆ ಮತ್ತು ವಿದ್ಯುತ್ ಅಡಚಣೆ ಕಡಿಮೆಯಾಗಿರುತ್ತದೆ.

II. ಮೇಲ್ಕಾಣಿಸಿದ ಯೋಜನೆಗಳ ಪೈಕಿ ಜಾರಿಗೊಳಿಸಬೇಕಿರುವ ಯೋಜನೆಗಳ ವಿವರಗಳು:

ಕ್ರ ಸಂ	ಯೋಜನೆ	ವಿವರಗಳು
1	ಮೇಘಲಾಪುರದಲ್ಲಿ 66/11 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ	ಈ ಕಾಮಗಾರಿಯನ್ನು ಡಿಸೆಂಬರ್ 2005 ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.
2	ಬಸ್ತಿಪುರದಲ್ಲಿ 400 ಕೆ.ವಿ ವಿದ್ಯುತ್ ಕೇಂದ್ರದ ನಿರ್ಮಾಣ	ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಪಿ.ಜಿ.ಸಿ.ಐ.ಎಲ್. ಸಂಸ್ಥೆಯು ನಿರ್ಮಾಣ ಕಾರ್ಯವನ್ನು ಕೈಗೊಂಡಿರುತ್ತದೆ. ನಿರ್ಮಾಣ ಕಾರ್ಯಗಳು **ಡಿಸೆಂಬರ್ 2005ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ** ಇದೆ.
3	ಇಲವಾಲದಲ್ಲಿ 66/11 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ	ಈ ಕಾಮಗಾರಿಯನ್ನು 2006 ರ ವರ್ಷದಲ್ಲಿ ಪೂರ್ಣಗೊಳಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.
4	ಜಯಪುರದಲ್ಲಿ 66/11 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ	ಈ ಕಾಮಗಾರಿಯನ್ನು 2006 ರ ವರ್ಷದಲ್ಲಿ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.
5	ವಾಜಮಂಗಲದಲ್ಲಿ 220 ಕೆವಿ ವಿದ್ಯುತ್ ಕೇಂದ್ರದ ನಿರ್ಮಾಣ	ಈ ಕಾಮಗಾರಿಯನ್ನು 2006ರ ವರ್ಷದಲ್ಲಿ ಕೈಗೊಂಡು 2007 ರ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.
6	ಮೈಸೂರು ನಗರದಲ್ಲಿ ಎ.ಪಿ.ಡಿ.ಆರ್.ಪಿ ಯೋಜನೆ ಅಡಿಯಲ್ಲಿ ವ್ಯವಸ್ಥೆ ಸುಧಾರಣಾ ಕಾಮಗಾರಿಗಳು	ಮೈಸೂರು ನಗರದಲ್ಲಿ ಎ.ಪಿ.ಡಿ.ಆರ್.ಪಿ.ಯೋಜನೆ ಅಡಿಯಲ್ಲಿ ವ್ಯವಸ್ಥೆ ಸುದಾರಣಾ ಕಾಮಗಾರಿಗಳಾದ ಹೊಸ 11 ಕೆ.ವಿ. ವಿದ್ಯುತ್ ಮಾರ್ಗಗಳ ನಿರ್ಮಾಣ, ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ, ಕಡಿಮೆ ಗಾತ್ರದ ವಿದ್ಯುತ್ ವಾಹಕಗಳನ್ನು ಹೆಚ್ಚಿನ ಗಾತ್ರದ ವಿದ್ಯುತ್ ವಾಹಕಗಳ ಮೂಲಕ ಬದಲಾಯಿಸುವುದು – ಇವುಗಳನ್ನು ಕೈಗೊಂಡಿದ್ದು ಈ ಕಾಮಗಾರಿಗಳನ್ನು ಡಿಸೆಂಬರ್ 2005 ರ ಅಂತ್ಯದ ವೇಳೆಗೆ ಪೂರ್ಣಗೊಳಿಸಿರುವ ಗುರಿಯನ್ನು ಹೊಂದಲಾಗಿದೆ.

ಈ) ಮೇಲೆ ತಿಳಿಸಿದ ಎಲ್ಲಾ ಯೋಜನೆಗಳು ಅನುಷ್ಠಾನಗೊಂಡ ನಂತರ, ಮೈಸೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ, ಬೇಡಿಕೆಗೆ ತಕ್ಕಂತೆ ವಿದ್ಯುತ್ ಉತ್ಪಾದನೆ ಆದಲ್ಲಿ ಮುಂದಿನ 6–7 ವರ್ಷಗಳ ಕಾಲ ವಿದ್ಯುಚ್ಛಕ್ತಿ ಸರಬರಾಜು ಸಮಸ್ಯೆ ಇರುವುದಿಲ್ಲವೆಂದು ಈ ದಿಶೆಯಲ್ಲಿ ನಡೆಸಲಾಗಿರುವ ಅಧ್ಯಯನಗಳ ಮೂಲಕ ತಿಳಿದು ಬಂದಿರುತ್ತದೆ.

ಉ) ಬಸ್ತಿಪುರದ 400 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಿಂದ 220 ಕೆ.ವಿ. ಹೂಡಗಳ್ಳಿ ಮತ್ತು ಕಡಕೋಳ ವಿದ್ಯುತ್ ಸ್ವೀಕರಣಾ ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಆಗಲಿದ್ದು, ಈ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳ ವ್ಯಾಪ್ತಿಗೆ ಬರುವ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಾದ ಎಫ್.ಟಿ.ಎಸ್. ವಿಜಯನಗರ, ಮೈಸೂರು ದಕ್ಷಿಣ, ಬೋಗಾದಿ, ಆರ್.ಕೆ.ನಗರ, ದಟ್ಟಗಳ್ಳಿ, ಆರ್.ಬಿ.ಐ. ಹೆಬ್ಬಾಳ, ಮೇಟಗಳ್ಳಿ, ವಿಕ್ರಾಂತ್ ರೇಡಿಯಲ್, ಬಿ.ಇ.ಎಂ.ಎಲ್. ಮತ್ತು ಆಕ್ಸಲ್, ಮತ್ತು ದೊಡ್ಡಕೆರೆ ಮೈದಾನ ಈ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಎಲ್ಲಾ ಬಡಾವಣೆಗಳಿಗೆ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಒದಗಿಸಲು ಉದ್ದೇಶಿಸಿದೆ ಬಸ್ತಿಪುರದಲ್ಲಿ 400 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ ಕಾರ್ಯಾರಂಭ ಮಾಡಿದ ನಂತರ, ಮೈಸೂರು ನಗರದಾದ್ಯಂತ, ವಿದ್ಯುತ್ ಸರಬರಾಜಿನ ಗುಣಮಟ್ಟದಲ್ಲಿ ಗಣನೀಯ ಸುಧಾರಣೆ ಉಂಟಾಗುತ್ತದೆ.

ವಾಜಮಂಗಲದಲ್ಲಿ 2x10 ಎಂ.ವಿ.ಎ. 220/66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ, ವಾಜಮಂಗಲವೂ ಸೇರಿದಂತೆ, ಬನ್ನೂರು, ಟಿ.ನರಸೀಪುರ ಮತ್ತು ಕಿರುಗಾವಲು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಗಣನೀಯ ಸುಧಾರಣೆ ಉಂಟಾಗುತ್ತದೆ. ಮೇಘಲಾಪುರದಲ್ಲಿ 1x6.3 ಎಂ.ವಿ.ಎ. 66/11 ಕೆವಿ. ವಿದ್ಯುತ್ ಉಪ ಕೇಂದ್ರ ಕಾರ್ಯಾರಂಭಗೊಂಡ ನಂತರ, ಮೇಘಲಾಪುರವೂ ಸೇರಿದಂತೆ, ಹಾರೋಹಳ್ಳಿ, ಎಡಕೊಡ ಮತ್ತು ದುದ್ದಗೆರೆ ಹಾಗೂ ಜಯಪುರದಲ್ಲಿ 2x8 ಎಂ.ವಿ.ಎ. ಸೇರಿದಂತೆ, ಗೋಪಾಲಪುರ, ಸಾತನೂರು ವಿ.ಪಾಳ್ಯ, ಜಿ.ಬೆಟ್ಟ ಮತ್ತು ಇಲವಾಲದಲ್ಲಿ 2x8 ಎಂ.ವಿ.ಎ. 66/11 ಕೆವಿ. ವಿದ್ಯುತ್ ಉಪ–ಕೇಂದ್ರ ಕಾರ್ಯಾರಂಭಗೊಂಡ ನಂತರ, ಜಯಪುರವೂ ಸೇರಿದಂತೆ, ಹನುಮಂತಪುರ, ಹುಯಿಲಾಳು, ಬೊಮ್ಮನಹಳ್ಳಿ, ಆನಂದೂರು ಮತ್ತು ಬಿಳಿಕೆರೆ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಗಣನೀಯ ಸುಧಾರಣೆ ಉಂಟಾಗುತ್ತದೆ.

ವಿದ್ಯುತ್ ಸಬ್–ಸ್ಟೇಷನ್ನುಗಳ ನಿರ್ಮಾಣದಿಂದ ಮಾತ್ರ ವಿದ್ಯುತ್ ಕೊರತೆಯನ್ನು ನೀಗಲು ಸಾಧ್ಯವಿಲ್ಲ. ವಿದ್ಯುತ್ ಬೇಡಿಕೆಗೆ ಸಮಾನಾಂತರವಾಗಿ ವಿದ್ಯುತ್ ಉತ್ಪಾದನೆಯೂ ಹೆಚ್ಚಳಗೊಳ್ಳಬೇಕಾಗಿರುತ್ತದೆ. ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯನ್ನೂ ನಿವಾರಿಸಲು 10ನೇ ಪಂಚವಾರ್ಷಿಕ ಯೋಜನೆಯ ಉಳಿದ ಅವಧಿಯಲ್ಲಿ ಒಟ್ಟು 1141 ಮೆಗಾ ವ್ಯಾಟ್ ಹಾಗೂ 11ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು 3699 ಮೆಗಾವ್ಯಾಟ್ ನಷ್ಟು ಹೆಚ್ಚುವರಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಗ್ರಿಡ್‌ಗೆ ಸೇರ್ಪಡೆಗೊಳ್ಳುವ ನಿರೀಕ್ಷೆ ಇದೆ.